# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ | ಭಾದ್ರಪದ | ಅಗಸ್ಟ್ ೨೦೦೯ | ಸಂಪುಟ–೩ | ಸಂಚಿಕೆ–೮


## ಗುರುವಾಣಿ



### ಹೂರಣ


ಗುರುವಾಣಿ

ಪ್ರಶ್ನೋತ್ತರ

ಮಾಸದ ಗೋವು: ಪುಂಗನೂರು

'ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ'ಯ ಸ್ಥೂಲ ಸ್ವರೂಪ

ಸರ್ವರೋಗಹರ ಪಂಚಗವ್ಯ ಎಚ್1ಎನ್1ಗೂ ಮಾರಕ

ಮಾವಿನ ರಕ್ಷಣೆಗೆ ಸಗಣಿ ಮತ್ತು ಗಂಜಲ



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




## 'ಗಾವೋ ವಿಶ್ವಸ್ಯ ಮಾತರಃ'

ಗೋವು, ಗಂಗೆ, ಗಾಯತ್ರಿ, ಗೀತಾ ಮತ್ತು ಗುರು ಈ ರೀತಿಯ ಭಾರತೀಯ ಚಿಂತನೆಯ ಅತಿಶ್ರೇಷ್ಠ ಪಂಚ 'ಗ'ಕಾರಗಳಲ್ಲಿ ಅತಿಶ್ರೇಷ್ಠವಾದುದು ಗೋವು. ಸಕಲರಿಗೂ ನಿಸ್ವಾರ್ಥತೆಯಿಂದ ಸೌಭಾಗ್ಯ ಕರುಣಿಸುವ 'ಕಾಮಧೇನು' ಎಂದು ನಿಜವಾದ ಅರ್ಥದಲ್ಲಿ ಕರೆಯಲ್ಪಡುವ ಆ ಗೋಮಾತೆಯನ್ನು ವಿಶ್ವಮಾತೆಯಾಗಿಸುವಲ್ಲಿ ನಾವಿಂದು ಸಕ್ರಿಯವಾಗಲೇಬೇಕಿದೆ.

'ಗಾವೋ ವಿಶ್ವಸ್ಯ ಮಾತರಃ', ಅಂದರೆ ಹಳ್ಳಿ ಇರಬಹುದು, ಪಟ್ಟಣವಿರಬಹುದು, ಏನೇ ಇದ್ದರೂ ಅದೆಲ್ಲವಕ್ಕೂ ವಿಶ್ವದ ಸಮಸ್ತ ಜೀವಿಗಳಿಗೂ ಗೋವು 'ತಾಯಿ'ಯಾಗಿ ನಿರ್ವಂಚನೆಯಿಂದ ಮಾತೃಪ್ರೇಮವನ್ನು ಉಣಬಡಿಸುತ್ತಿದ್ದಾಳೆ. ಅದು ಅಮೃತ ರೂಪಿಯಾದ 'ಗೋಕ್ಷೀರ' ಇರಬಹುದು; ಅಷ್ಟೈಶ್ವರ್ಯ ಸಹಿತವಾದ, ಮಹಾಲಕ್ಷ್ಮಿಯ ಆವಾಸ ಸ್ಥಾನವಾದ 'ಗೋಮಯ'ವಾಗಿರಬಹುದು; ಸಕಲ ತೀರ್ಥಗಳ ಆವಾಸವಾದ 'ಗೋಮೂತ್ರ' ಇರಬಹುದು ಅಥವಾ ತನ್ನ ಉಸಿರಾಟದಿಂದಲೇ ಪರಿಸರವನ್ನು ಶುದ್ಧೀಕರಿಸುವುದಿರಬಹುದು; ಈ ರೀತಿ ಯಾವುದೇ ಮೂಲದಿಂದಲೂ ನಮ್ಮನ್ನು ಉತ್ತಮತೆಯೆಡೆಗೆ ಕರೆದೊಯ್ಯುತ್ತಿರುವುದನ್ನು ನಮ್ಮ ಹಿರಿಯರು ಕಂಡೇ ಗೋವನ್ನು ಮಾತೆಯಾಗಿ ಕಾಣುತ್ತಿದ್ದರು.

ಆದರೆ, ಇಂದು ಆಧುನಿಕತೆ, ಕೃತಕತೆ ಇವುಗಳಿಗೆ ಪೂರಕವಾಗಿ ಯಾಂತ್ರೀಕೃತ ಜಗತ್ತಿನಲ್ಲಿ ನಾವೂ ಯಂತ್ರಗಳಾಗುತ್ತಿದ್ದೇವೆ. **ಮಳೆ ಬಾರದೇ ಬರ ಏಕೆ ಬಂತು ಎನ್ನುವುದರ ಹಿನ್ನೆಲೆ ನೋಡದೇ...** ಮುನ್ನೋಟವನ್ನೇ ನೋಡುತ್ತಿದ್ದೇವೆ. ನಿಜವಾಗಿ ಪೂರ್ತಿ ಜಗತ್ತಿನ ಆತ್ಮ ನೆಲೆಸಿರುವುದು ಹಳ್ಳಿಗಳಲ್ಲಿ – ಹಳ್ಳಿಗಳ ಆತ್ಮ ಕೃಷಿಯಲ್ಲಿ – ಕೃಷಿಯ ಆತ್ಮ ಪವಿತ್ರ ಗೋಮಾತೆಯಲ್ಲಿ. ಆದರೆ, ಇದೆಲ್ಲವನ್ನೂ ಮರೆತು ಕೃಷಿಯ ಬೆಳವಣಿಗೆಗೆ ಆಧುನಿಕತೆ, ರಾಸಾಯನಿಕ ಗೊಬ್ಬರ, ಕೀಟನಾಶಕ ಇತ್ಯಾದಿಗಳ ಬಳಕೆಯಿಂದ ಸಮಗ್ರ ಪರಿಸರವನ್ನು ವಿಷಮಯಗೊಳಿಸಿ, ನಾವೂ ವಿಷವಾಹಕರಾಗುವಲ್ಲಿ ಭರದಿಂದ ಮುನ್ನುಗ್ಗುತ್ತಿದ್ದೇವೆ.

ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ನಾವು ನಮ್ಮ ಬುದ್ಧಿಶಕ್ತಿಯನ್ನು ಒರೆಗೆ ಹಚ್ಚಲೇಬೇಕಿದೆ. ಗೋವು–ಗ್ರಾಮ ಯಾವ ರೀತಿ ವಿಶ್ವೋನ್ನತಿಗೆ ಪೂರಕ ಎನ್ನುವುದಕ್ಕಾಗಿ ಚಿಂತನಾ ರೂಪವಾಗಿ ಹೋರಾಟ ನಡೆಸಲೇಬೇಕಿದೆ. ಖಂಡಿತವಾಗಿಯೂ ಇದೊಂದು ವಿಶ್ವಯುದ್ಧವೇ ಸರಿ. ಈ ಹಿನ್ನೆಲೆಯಲ್ಲಿ ಈಗ ಆಯೋಜಿಸಿದ ಸಂತ–ಸಮಾಜದ ಸಹಯೋಗದ **'ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ'**ಯಲ್ಲಿ ಸಮಸ್ತರೂ ಪೂರ್ಣ ಮನಸ್ಸಿನಿಂದ ತೊಡಗಿಸಿಕೊಳ್ಳೋಣ. ಗೋಮಾತೆಯ ರಕ್ಷಣೆಗಾಗಿ ಟೊಂಕಕಟ್ಟಿ ಸನ್ನದ್ಧರಾಗೋಣ. ತನ್ಮೂಲಕ ಗ್ರಾಮರಾಜ್ಯ ರಾಮರಾಜ್ಯ ಮಾಡುತ್ತ ವಿಶ್ವವನ್ನು ಮಂಗಲಮಯಗೊಳಿಸೋಣ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ



# ಪ್ರಶ್ನೋತ್ತರ

ಪ್ರ: ಭಾರತದ ಸ್ವಾತಂತ್ರ್ಯ ಹೋರಾಟಕ್ಕೂ ಗೋ ಸಂರಕ್ಷಣೆಗೂ ಏನಾದರೂ ಸಂಬಂದವಿದೆಯೇ?
ಉ: ಬಿಡಿಸಲಾರದ ಸಂಬಂಧವಿದೆ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಎಲ್ಲಾ ಗೌರವಾನ್ವಿತ ರಾಷ್ಟ್ರನಾಯಕರೂ ಗೋವಿನ ಬಗ್ಗೆ ಅಪಾರ ಶ್ರದ್ಧಾ ಭಕ್ತಿ ಇಟ್ಟುಕೊಂಡವರು. ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ಅವರ ತಂದೆ ಮೋತಿಲಾಲ್ ನೆಹರು ಅಂಥ ಧೀಮಂತರನ್ನು ಒಮ್ಮೆ ಹೈದರಾಬಾದ್ ನಿಜಾಮ ವ್ಯಂಗ್ಯವಾಗಿ ಕೇಳಿದನಂತೆ. " ನಿಮಗೆ ಗೋಮಾಂಸ ರುಚಿಸುತ್ತದೆಯೇ?" ಮೊತಿಲಾಲರು ಅಷ್ಟೇ ವ್ಯಂಗ್ಯವಾಗಿ ಉತ್ತರಿಸಿದರು. "ನನಗೆ ಗೋಮಾಂಸಕ್ಕಿಂತ ಗೋಮಾಂಸ ಭಕ್ಷಕರ ಮಾಂಸ ಹೆಚ್ಚು ರುಚಿಸುತ್ತದೆ".

ಪ್ರ: ಗೋ ಸಂರಕ್ಷಣೆಯ ಬಗ್ಗೆ ಮಹಾತ್ಮಾ ಗಾಂಧಿಯವರ ಅಭಿಪ್ರಾಯವೇನಿತ್ತು?
ಉ: ಮಹಾತ್ಮಾ ಗಾಂಧಿ ಗೋಸಂರಕ್ಷಣೆಯ ಬಗ್ಗೆ ಅಪಾರ ಕಳಕಳಿ ಹೊಂದಿದ್ದರು. ಅವರಿಗೆ ಸ್ವರಾಜ್ಯಕ್ಕಿಂತಲೂ ಗೋಸಂರಕ್ಷಣೆ ಹೆಚ್ಚು ಪ್ರಧಾನವಾಗಿತ್ತು. ಅವರ ಹೇಳಿಕೆಗಳನ್ನು ನೋಡಿ.
"ಗೋ ಸಂರಕ್ಷಣೆಯ ಪ್ರಶ್ನೆ ಸ್ವರಾಜ್ಯಕ್ಕಿಂತ ಒಂದು ಕೈ ಮಹತ್ವದ್ದೇ ಸರಿ".
"ಗೋಹತ್ಯೆ ನಡೆಯುತ್ತಿರುವವರೆಗೂ ನನ್ನ ಸ್ವಂತದ ಹತ್ಯೆಯಾಗುತ್ತಿದೆ ಎಂದೇ ನಾನು ಭಾವಿಸುತ್ತೇನೆ". (ಈ ಅರ್ಥದಲ್ಲಿ ಭಾರತ ಸರಕಾರವು ಗಾಂಧೀಜಿ ಹತ್ಯೆಗೆ ನಿರಂತರ ಪ್ರೋತ್ಸಾಹ ನೀಡುತ್ತಿದೆ)
"ನಾನು ಮುಸಲ್ಮಾನರಿಗಾಗಿ ಸಾಧ್ಯವಾದಷ್ಟು ದುಃಖ ಸಹಿಸಿದೆ. ಸ್ವರಾಜ್ಯ ಪ್ರಾಪ್ತಿಯ ಸಣ್ಣ ಸಂಗತಿಯಂತೂ ಇದ್ದೆ ಇತ್ತು. ಅದರ ಜತೆಗೆ ಗೋವನ್ನು ರಕ್ಷಿಸುವ ಹಿರಿಯ ಸಂಗತಿಯೂ ಇತ್ತು."

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ಪುಂಗನೂರು

ಮೂಲ: ಆಂಧ್ರಪ್ರದೇಶ
ವಿಭಾಗ: ಉಭಯ.
ಮಧ್ಯಮ ಗಾತ್ರದವು
ಎತ್ತರ: ೬೦-೧೦೦ ಸೆ.ಮಿ.
ಬಣ್ಣ: ಬಿಳಿ, ಬೂದು ಹಾಗೂ ಕೌಲು
ಮುಖ: ಅಗಲ ಹಣೆ
ಕೊಂಬು: ಗಿಡ್ಡ ಗೋಪುರಾಕೃತಿ
ಕಾಲು: ಸಣ್ಣದು

ಭಾರತೀಯ ಗೋವಂಶದ, ಅಳಿವಿನಂಚಿಗೆ ಅತ್ಯಂತ ವೇಗವಾಗಿ ಜಾರುತ್ತಿರುವ ತಳಿಗಳಲ್ಲಿ ಪುಂಗನೂರು ಕೂಡ ಒಂದು. ಒಂದು ಕಾಲದಲ್ಲಿ ಅಂದ್ರಪ್ರದೇಶದ ವಯಲ್ಪಾಡು, ಮದನಪಲ್ಲಿ, ಪಲಮನೇರ್ ಪ್ರಾಂತ್ಯಗಳಲ್ಲಿ ವ್ಯಾಪಕವಾಗಿ ಮನೆಮನಗಳಲ್ಲಿ ತುಂಬಿದ್ದ ಇದು, ಇಂದು ತನ್ನ ಹುಟ್ಟೂರಿನಲ್ಲಿಯೇ ಬೆರಳೆಣಿಕೆಯ ಸಂಖ್ಯೆಗಿಳಿದಿದೆ. 2005ರಲ್ಲಿ ಆಚಾರ್ಯ ಎನ್.ಜಿ. ರಂಗ ಕೃಷಿ ವಿಶ್ವವಿದ್ಯಾಲಯವು ಪುಂಗನೂರು ತಳಿಯ ಪ್ರಾಬಲ್ಯವಿದ್ದ ಪ್ರದೇಶಗಳಲ್ಲಿನ 150 ಹಳ್ಳಿಗಳಲ್ಲಿ ನಡೆಸಿದ ಗಣತಿಯಲ್ಲಿ ಕೇವಲ 21 ಶುದ್ಧ ಪುಂಗನೂರು ತಳಿಯ ಗೋವುಗಳು ಪತ್ತೆಯಾದವು!

ಪುಂಗನೂರು ತಳಿಯ ಹುಟ್ಟೂರು ಚಿತ್ತೂರು ಜಿಲ್ಲೆಯ ಪುಂಗನೂರು. ಅಲ್ಲಿಯ ರಾಜರು ಈ ತಳಿಯನ್ನು ಅಭಿವೃದ್ಧಿಪಡಿಸಿದರೆಂದು ಪ್ರತೀತಿ. ಪುಂಗನೂರು ತಳಿಯ ಹಸುಗಳು ಉತ್ತಮ ಹೈನುಗಾರಿಕಾ ತಳಿಗಳು ಮಾತ್ರವಲ್ಲ, ಹುಡಿಮಣ್ಣಿನ ಭೂಮಿಯಲ್ಲಿ ಉತ್ತಮ ಕೆಲಸಗಾರ ತಳಿ ಕೂಡ ಹೌದು. ಎತ್ತುಗಳನ್ನು ಟಾಂಗಾಗಳಿಗೆ ಮುಖ್ಯವಾಗಿ ಬಳಸುತ್ತಾರೆ. ಕಡಿಮೆ ತೂಕದ ಗುಡ್ಡಗಾಡಿನ ಕೆಲಸಗಳಿಗೆ ಸೂಕ್ತವಾದ 3 ತಳಿಗಳಲ್ಲಿ (ಮಲೆನಾಡು ಗಿಡ್ಡ, ವೇಚೂರ್, ಪುಂಗನೂರು) ಇದೂ ಒಂದೆಂಬುದು ಇದರ ಹೆಗ್ಗಳಿಕೆ.

ಪಲಮನೇರ್ ಆಸುಪಾಸಿನ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ಬೆಳೆಯುವ ಬತ್ತದ ಹುಲ್ಲು, ಕಬ್ಬಿನ ಸಿಪ್ಪೆ ಇತ್ಯಾದಿಗಳನ್ನು ಇವುಗಳ ಆಹಾರವಾಗಿ ನೀಡಲಾಗುತ್ತದೆ. ಶೇಂಗಾ ಹಿಂಡಿ ಕೂಡ ಪ್ರಚಲಿತವಿರುವ ಮೇವು.



**ಪುಂಗನೂರು, ಆಂಧ್ರಪ್ರದೇಶ**

ಪುಂಗನೂರು ತಳಿಗಳು ಬಿಳಿ, ಬೂದು ಹಾಗು ಕೌಲು ಬಣ್ಣದಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಬಿಳಿದನಗಳ ಮೇಲೆ ಅರೆಗಪ್ಪು ಬಣ್ಣದ ಪಟ್ಟೆಗಳಿರುವ ಹಸುಗಳು ಅಪರೂಪವೇನಲ್ಲ. ಈ ತಳಿಯ ಹಸುಗಳು ಮಧ್ಯಮ ಗಾತ್ರದವಾದರೂ ತುಂಬ ಸಧೃಡ ಎನ್ನುತ್ತಾರೆ ರೈತರು. ಅಗಲ ಹಣೆ, ಗಿಡ್ಡ ಗೋಪುರಾಕೃತಿಯ ಕೆಲವೊಮ್ಮೆ ಹಿಂಬಾಗಿದ ಕೋಡು, ಉದ್ದ ಕತ್ತು, ಪುಟ್ಟ ಕಾಲುಗಳು ಇತ್ಯಾದಿ ಇವುಗಳ ದೈಹಿಕ ಲಕ್ಷಣಗಳು.

ಇದನ್ನು ಪ್ರಪಂಚದ ಅತಿ ಗಿಡ್ಡ ತಳಿ ಎಂದೂ ಕರೆಯಬಹುದು. ಇವುಗಳ ಎತ್ತರ 60ರಿಂದ 100 ಸೆ.ಮೀ. ಮಾತ್ರ. ಇವುಗಳ ತೂಕ 115ರಿಂದ 200 ಕೆ.ಜಿ. ಇಷ್ಟು ಚಿಕ್ಕವಾದರೂ ಇವುಗಳ ಹಾಲು ನೀಡುವ ಸಾಮರ್ಥ್ಯ ಅಗಾಧ. ಇವು ದಿನಕ್ಕೆ 3ರಿಂದ 5 ಲೀ. ಹಾಲು ನೀಡಬಲ್ಲವು.



ಪುಂಗನೂರು ತಳಿಯ ಶೋಚನೀಯ ಪರಿಸ್ಥಿತಿಯನ್ನು ಮನಗಂಡ ತಿರುಮಲ ತಿರುಪತಿ ದೇವಸ್ಥಾನ ಆಡಳಿತ ಮಂಡಳಿ ಆಂದ್ರಪ್ರದೇಶದ ಚಿತ್ತೂರು ಜಿಲ್ಲೆಯ ಪಲಮನೇರ್‌ನಲ್ಲಿ ಗೊಶಾಲೆಯೊಂದನ್ನು ಸ್ಥಾಪಿಸಲು ಉದ್ಯುಕ್ತವಾಗಿದೆ. ಉದ್ದೇಶಿತ ಗೊಶಾಲೆಯಲ್ಲಿ ಶುದ್ಧ ಭಾರತೀಯ ಗೋತಳಿ ಅದರಲ್ಲೂ ಪುಂಗನೂರು ತಳಿಯ ಅಭಿವೃದ್ಧಿಗೆ ಒತ್ತು ನೀಡಲಾಗುವುದೆಂದು ಹೇಳಿದೆಯಾದರೂ ಇದೇ ಪ್ರದೇಶದಲ್ಲಿ ಸ್ಥಾಪಿತವಾಗುತ್ತಿರುವ ಇಸ್ರೇಲ್‌ನ ಎಲ್ಬಿಟ್ ಸಂಸ್ಥೆಯ ಡೈರಿಯೊಂದಿಗೆ ಇದು ಸ್ಪರ್ಧಿಸಬೇಕಿರುವುದರಿಂದ ಈ ಸದುದ್ದೇಶ ಸಾಧಿತವಾಗುವುದೇ ಎಂಬುದು ಈಗ ಗೋಪ್ರೇಮಿಗಳ ಮನಸ್ಸಿನಲ್ಲಿ ಕೊರೆಯುತ್ತಿರುವ ಪ್ರಶ್ನೆ.

**-ಮಧುಕೇಶ ದೊಡ್ಡೇರಿ**

# 'ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ'ಯ ಸ್ಥೂಲ ಸ್ವರೂಪ

- **ಸಿದ್ಧಾಂತ** : ಗಾವೋ ವಿಶ್ವಸ್ಯ ಮಾತರಃ
- **ಸಂಕಲ್ಪ** : ಗೋರಕ್ಷಾ ಮಮ ದೀಕ್ಷಾ
- **ಮಂತ್ರ** : ಗಾವೋ ರಕ್ಷತಿ ರಕ್ಷಿತಃ
- **ಧ್ಯೇಯ** : ಗೋಭಕ್ತಿಯಿಂದ ಗ್ರಾಮೋದಯ, ಗ್ರಾಮೋದಯದಿಂದ ರಾಷ್ಟ್ರೋದಯ, ರಾಷ್ಟ್ರೋದಯದಿಂದ ವಿಶ್ವದ ಮಂಗಲ
- **ಮಾಧ್ಯಮ** : ಗೋಮಾತೆ
- **ಸಂದೇಶ** : ಚಲೇಂ ಗಾಂವ್ ಕೀ ಓರ್ । ಚಲೇಂ ಗಾಯ್ ಕೀ ಓರ್ । ಚಲೇಂ ಪ್ರಕೃತಿ ಕೀ ಓರ್ ।
- **ದಿವ್ಯ ಸಂಕಲ್ಪ** : ಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ, ಶ್ರೀರಾಮಚಂದ್ರಾಪುರಮಠ
- **ಪ್ರವರ್ತಕರು** : ಪೂಜ್ಯ ಶ್ರೀ ಶ್ರೀ ರವಿಶಂಕರ್‌ಜೀ, ಪೂಜ್ಯ ಶ್ರೀ ಶ್ರೀ ರಾಮ್‌ದೇವ್‌ಜೀ ಬಾಬಾ, ಪೂಜ್ಯ ಶ್ರೀ ಶ್ರೀ ಮಾತಾ ಅಮೃತಾನಂದಮಯೀಜೀ, ಪೂಜ್ಯ ಆಚಾರ್ಯ ಶ್ರೀ ಶ್ರೀ ವಿದ್ಯಾಸಾಗರಜೀ, ಪೂಜ್ಯ ಆಚಾರ್ಯ ಶ್ರೀ ಶ್ರೀ ಮಹಾಪ್ರಜ್ಞಜೀ, ಪೂಜ್ಯ ಆಚಾರ್ಯ ಶ್ರೀ ಶ್ರೀ ವಿಜಯ ರತ್ನಸುಂದರ ಸುರೀಶ್ವರಜೀ, ಪೂಜ್ಯ ಶ್ರೀ ಶ್ರೀ ಸ್ವಾಮಿ ದಯಾನಂದ ಸರಸ್ವತಿಜೀ, ಪೂಜ್ಯ ಶ್ರೀ ಶ್ರೀ ಮುರಾರಿ ಬಾಪೂಜಿ ಮಹಾರಾಜ್, ಪೂಜ್ಯ ಶ್ರೀ ಶ್ರೀ ಜಗಜೀತ್ ಸಿಂಹಜೀ ಮಹಾರಾಜ್, ಪೂಜ್ಯ ಶ್ರೀ ಶ್ರೀ ಸ್ಯಾಮ್‌ಡಾಂಗ್ ರಿನ್‌ಪೋಚೆಜೀ
- **ಸಂಘಟನೆ** : ಪೂಜ್ಯ ಡಾ. ಪ್ರಣವ್ ಪಂಡ್ಯಾಜೀ ಅವರ ಗೌರವಾಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಮಿತಿ ; ಪ್ರಾಂತ-ಜಿಲ್ಲಾ ಮಟ್ಟಗಳಲ್ಲಿ ಮಾರ್ಗದರ್ಶಕ ಮಂಡಲ, ಸ್ವಾಗತ ಸಮಿತಿ, ಸಂಚಾಲನಾ ಸಮಿತಿ, ಅರ್ಥ ಸಮಿತಿ, ಪ್ರಚಾರ ಸಮಿತಿ







- **ಸಹಭಾಗಿತ್ವ** : ಸಮಸ್ತ ಗೋ ಪ್ರೇಮಿಗಳು
- **ಯಾತ್ರೆಯ ಶುಭಾರಂಭ** : ವಿಜಯದಶಮಿ, 30ನೇ ಸೆಪ್ಟೆಂಬರ್ 2009, ಕುರುಕ್ಷೇತ್ರದಲ್ಲಿ
- **ಯಾತ್ರೆ** : 108 ದಿನ
- **ವಿಶೇಷ** : ಗೋಪೂಜೆ, ಗೋಸಂದೇಶ, ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮ ; ಒಟ್ಟಾರೆ ಹಬ್ಬದ ಸಡಗರ
- **ಸಾಗುವ ದೂರ** : 20,000 ಕಿ.ಮೀ.
- **ಸಭಾ ಕಾರ್ಯಕ್ರಮ** : ಭಾರತದ 400 ಕೇಂದ್ರಗಳಲ್ಲಿ
- **ಉಪಯಾತ್ರೆ** : ಒಟ್ಟು 15,000, ಜಿಲ್ಲೆ-ತಾಲೂಕು-ಹೋಬಳಿ ಕೇಂದ್ರಗಳಿಂದ
- **ಉಪಯಾತ್ರೆಗಳು ಕ್ರಮಿಸುವುದು** : ಒಟ್ಟು 10 ಲಕ್ಷ ಕಿ.ಮೀ.
- **ಯಾತ್ರೆಯ ಸಮಾರೋಪ** : ಮಕರ ಸಂಕ್ರಾಂತಿ, 17ನೇ ಜನವರಿ 2010, ನಾಗಪುರದಲ್ಲಿ
- **ಹಸ್ತಾಕ್ಷರ ಅಭಿಯಾನ** : ಗೋವಿಗಾಗುತ್ತಿರುವ ಹಿಂಸೆಯನ್ನು ವಿರೋಧಿಸಿ ಹಾಗೂ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಲು ಆಗ್ರಹಿಸಿ ಕೋಟ್ಯಂತರ ಸಹಿ ಸಂಗ್ರಹ.
- **ಭಾರತದ ಘನತೆವೆತ್ತ ರಾಷ್ಟ್ರಪತಿಗಳಿಗೆ ಪ್ರಸ್ತಾವನೆ** : ಕೋಟ್ಯಂತರ ಸಹಿಗಳೊಂದಿಗೆ 29ನೇ ಜನವರಿ, 2010ರಂದು ಸಲ್ಲಿಸಲಾಗುವುದು.

# ಸರ್ವರೋಗಹರ ಪಂಚಗವ್ಯ ಎಚ್1ಎನ್1ಗೂ ಮಾರಕ

ನಮ್ಮ ಶ್ರೀ ಗುರುಗಳು ಹೇಳಿದ ಮಾತು –"ನಿಧಾನವಾಗಿ ಇಡೀ ಲೋಕವೇ ಮತ್ತೆ ಗೋಮಾತೆಯ ಕಡೆಗೇ ಬರುತ್ತದೆ. ಅವನತಿಯತ್ತ ಸಾಗುವಾಗ ಅವಳೇ ಗತಿಯೆಂದು ಸರ್ವತ್ರ ತಿಳಿಯುತ್ತದೆ". ಹೌದು, ಈ ಮಾತು ನಿಜವಾಗುತ್ತಲಿದೆ. ಜನರಲ್ಲಿ ಗೋಮಾತೆಯ ಮಹತ್ವದ ಅರಿವು ಮೂಡಿತ್ತಿದೆ. ಮೂಡಲೇ ಬೇಕಾದ ಅನಿವಾರ್ಯ ಸಂದರ್ಭಗಳು ಬರುತ್ತಿವೆ.

ಇತ್ತೀಚಿನ ದಿನಗಳಲ್ಲಿ ಮಾಧ್ಯಮ ಪ್ರಚಾರದ ಭರಾಟೆಯಿಂದ ವಿರಾಟ್ ರೂಪ ಪಡೆಯುತ್ತಿರುವ ಹಂದಿಜ್ವರ ದೇಶಾದ್ಯಾಂತ ಒಂದು ತಲ್ಲಣವನ್ನೇ ಎಬ್ಬಿಸಿದೆ. ಸಾಮಾನ್ಯ ಜ್ವರದಂತೇ ಇರುವ ಇದು ಅಪಪ್ರಚಾರದಿಂದಾಗಿ ಭೀತಿಯ ವಾತಾವರಣ ಸೃಷ್ಟಿಸಿದೆ. ಟಾಮಿಮಾತ್ರೆಯೊಂದೆ ಮದ್ದೆಂಬ ಭ್ರಮೆ ಎಲ್ಲರಲ್ಲಿ ಮನೆಮಾಡಿದೆ. ಆದರೆ ಗವ್ಯ ಉತ್ಪನ್ನಗಳಲ್ಲಿ ಒಂದಾದ 'ಪಂಚಗವ್ಯ'ಕ್ಕೂ ಈ ರೋಗನಿರೋಧಕ ಶಕ್ತಿಯಿದೆ ಎಂಬುದು ಸಂಶೋಧನೆಗಳಿಂದ ಸಾಬೀತಾಗಿದೆ.

ಪರಾಶರಸ್ಮೃತಿಯಲ್ಲಿ ಹೇಳಿರುವಂತೆ "ಪಂಚಾನಾಂ ಗವ್ಯಾನಾಂ ಸಮಾಹಾರಹಃ" ಎಂದರೆ ಐದು ಗವ್ಯವಸ್ತುಗಳ ಸೇರುವಿಕೆಯಿಂದಾದದ್ದೇ ಪಂಚಗವ್ಯ. ಅವುಗಳೆಂದರೆ ಹಾಲು, ಮೊಸರು, ತುಪ್ಪ, ಗೋಮೂತ್ರ ಮತ್ತು ಗೋಮಯ. ಈ ಐದೂ ಉತ್ಪನ್ನಗಳು ಪ್ರತ್ಯೇಕವಾಗಿ ವಿವಿಧ ಔಷಧೀಯ ಗುಣ ಹೊಂದಿವೆ. ಅವುಗಳಿಂದ ತಯಾರಿಸಿದ ಪಂಚಗವ್ಯ ಮತ್ತಷ್ಟು ಶ್ರೇಷ್ಠವಾಗಿರಲೇ ಬೇಕಲ್ಲವೆ. ಇವೆಲ್ಲವೂ ನಮ್ಮ ದೇಶೀಯ ಗೋವಿನ ಉತ್ಪನ್ನಗಳಾಗಿರಬೇಕೆಂದುದು ಗಮನಿಸಬೇಕಾದ ಅಂಶ.

ಪಂಚಗವ್ಯ ನಮ್ಮ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ. ಸಾಮಾನ್ಯವಾಗಿ ಶಾಸ್ತ್ರಗಳಲ್ಲಿ ಪಂಚಗವ್ಯ ಸೇವನೆಯನ್ನು ಶರೀರಶುದ್ಧಿಗಾಗಿ, ಅಶೌಚ ನಿವಾರಣೆಗಾಗಿ ಹಾಗೂ ಪಾಪಪರಿಹಾರಕ್ಕಾಗಿ ಎಂದು ಹೇಳಿದರೂ ಆಯುರ್ವೇದ ಗ್ರಂಥಗಳಲ್ಲಿ ದೀರ್ಘಕಾಲೀನ ವ್ಯಾಧಿಗಳಲ್ಲಿ, ಬೇರೆ ಔಷಧಿಗಳಿಂದ ವಾಸಿಯಾಗದ ವ್ಯಾಧಿಗಳಲ್ಲಿ ಹಾಗೂ ಮನೋಗತವಾದ ವ್ಯಾಧಿಗಳಲ್ಲಿ ಇದರ ಉಪಯೋಗವನ್ನು ವಿವರಿಸಿದೆ. ಈಗಿನ ನಿರಂತರ ಸಂಶೋಧನೆಗಳಿಂದ ಮತ್ತಷ್ಟು ವಿಚಾರಗಳು ತಿಳಿದು ಬರುತ್ತಿವೆ.

ಪ್ರಸ್ತುತ ಸಂಶೋಧನೆಗಳ ಪ್ರಕಾರ ಪಂಚಗವ್ಯವು ಎಚ್1ಎನ್1 ಸೇರಿದಂತೆ ಇತರ ಹಲವಾರು ಜ್ವರಗಳಿಗೆ ಬಳಸಬಹುದಾದ ಉತ್ತಮ ಮದ್ದಾಗಿದೆ. ಪಂಚಗವ್ಯದಲ್ಲಿರುವ ಆವಿಶೀಲ ಮೇದಾಮ್ಲ ಹಾಗೂ ಪ್ರತಿಆಕ್ಸಿಡಕ [anti-oxidant] ಗುಣಗಳು ಎಚ್1ಎನ್1 ಮೊದಲಾದ ಜ್ವರಕಾರಕವಾದ ವೈರಸ್‌ಗಳ ಪ್ರಭಾವವನ್ನು ಕಡಿಮೆಮಾಡುವುದರೊಂದಿಗೆ ಅವುಗಳು ದ್ವಿಗುಣಗೊಳ್ಳುವುದನ್ನೂ ತಡೆಯುತ್ತವೆ.

ರಾಸಾಯನಿಕಯುಕ್ತ ಆಹಾರ ಮತ್ತು ಔಷಧಗಳ ಮೇಲೆ ಅವಲಂಬಿತವಾಗಿರುವ ನಾವು ಸ್ವಲ್ಪ ಇಂಥ ಉತ್ತಮ ವಿಚಾರಗಳತ್ತ ಗಮನಹರಿಸಿದರೆ ಆರೋಗ್ಯಭಾಗ್ಯವನ್ನು ಅತಿಸುಲಭವಾಗಿ ಪಡೆಯಬಹುದು.

ಯತ್ವಗಸ್ಥಿತಂ ಪಾಪಂ ದೇಹೇತಿಷ್ಠತಿ ಮಾಮಕೇ।

ಪ್ರಾಶನಾತ್ಪಂಚಗವ್ಯಸ್ಯ ದಹತ್ಯಗ್ನಿರಿವೇಂಧನಂ॥

– ಚರ್ಮದಿಂದ ಅಸ್ಥಿಪರ್ಯಂತವಾಗಿ ಯಾವ ಪಾಪ(ವ್ಯಾಧಿ) ದೇಹದಲ್ಲಿದೆಯೋ ಅದೆಲ್ಲವೂ ಪಂಚಗವ್ಯದ ಸೇವನೆಯಿಂದ (ಅಗ್ನಿಯಲ್ಲಿ ಎಲ್ಲಾ ಭಸ್ಮವಾಗುವಂತೆ) ಭಸ್ಮವಾಗಲಿ. ಅಂದರೆ ಸಪ್ತಧಾತುವರ್ಧಕವಾದ ಈ ಶರೀರದಲ್ಲಿ ಯಾವುದೇ ರೀತಿಯ ತೊಂದರೆಯಿದ್ದರೂ ಇದರಿಂದ ಗುಣಪಡಿಸಬಹುದು.

**– ಅನುಶ್ರೀ ಎಲ್.**

# ಹೆಚ್ಚಿನ ಮಾಹಿತಿ

ನಾಗಪುರದ ಗೋವಿಜ್ಞಾನ ಸಂಶೋಧನಾ ಕೇಂದ್ರದ ವಿಜ್ಞಾನಿ ಮೀರಾ ಔರಂಗಾಬಾದ್‌ಕರ್ ಅವರು ಹೇಳುವ ಪ್ರಕಾರ ಪಂಚಗವ್ಯವು ಸ್ವೈನ್ ಫ್ಲೂ ಸಹಿತ ಇತರೆ ಹಲವಾರು ರೋಗಗಳು ಬಾರದಂತೆ ತಡೆಗಟ್ಟುವ ಶಕ್ತಿ ಹೊಂದಿದೆ. ಪಂಚಗವ್ಯವು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅವರು ಹೇಳುವ ಪ್ರಕಾರ "ಹಲವು ಆಯುರ್ವೇದ ಔಷಧಿಗಳು ಅದರಲ್ಲೂ ಮುಖ್ಯವಾಗಿ ಗವ್ಯ ವಸ್ತುಗಳಿಂದ ತಯಾರಿಸಿದ ಔಷಧಿಗಳು ದೇಹದ ರೋಗನಿರೋಧಕ ಶಕ್ತಿಯನ್ನು ವೃದ್ಧಿಪಡಿಸಿ ಫ್ಲೂ ಮತ್ತು ಇತರೆ ಖಾಯಿಲೆಗಳು ಬಾರದಂತೆ ತಡೆಗಟ್ಟುವ ವಿಚಾರವು ಭಾರತೀಯರಿಗೆ ಶತಮಾನಗಳಿಂದಲೇ ತಿಳಿದಿತ್ತು. ಜನರು ಇವುಗಳನ್ನು ಆಧುನಿಕ ಔಷಧಿಗಳ ಜೊತೆ ತೆಗೆದುಕೊಳ್ಳುವಂತೆ ನಾವು ಸಲಹೆ ನೀಡುತ್ತೇವೆ. ಗೋಮೂತ್ರದಿಂದ ತಯಾರಿಸಿದ ಅರ್ಕವು ಜನರನ್ನು ವೈರಸ್‌ನ ಧಾಳಿಯಿಂದ ತಡೆಗಟ್ಟಬಲ್ಲುದು ಮಾತ್ರವಲ್ಲ, ಈಗಾಗಲೆ ಖಾಯಿಲೆಗೊಳಪಟ್ಟವರಿಗೆ ಪರಿಹಾರವನ್ನೂ ನೀಡಬಲ್ಲುದು".

ರಾಷ್ಟ್ರೀಯ ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನಾ ಕೇಂದ್ರದ ನಿರ್ದೇಶಕರಾದ ತಪನ್ ಚಕ್ರವರ್ತಿಯವರು ಹೇಳುವ ಪ್ರಕಾರ "ಪಂಚಗವ್ಯ ಮತ್ತು ಗೋಮೂತ್ರದ ಅರ್ಕಗಳು ಬೇಗ ಆವಿಯಾಗುವಂತಹ ಮೇದಾಮ್ಲಗಳನ್ನು ಹೊಂದಿದ್ದು ಆಂಟಿ ಆಕ್ಸಿಡೆಂಟ್‌ಗಳಾಗಿ ಕೆಲಸ ನಿರ್ವಹಿಸುತ್ತವೆ. ಅವು ವೈರಸ್‌ಗಳು ಪುನರುತ್ಪಾದನೆಯಾಗುವುದನ್ನು ತಡೆಗಟ್ಟುತ್ತವೆ. ಇದರಿಂದಾಗಿ ಹಂದಿಜ್ವರ ಅಥವಾ ಸ್ವೈನ್ ಫ್ಲೂಗೆ ಕಾರಣವಾಗಿರುವ ಎಚ್1ಎನ್1 ನಂತಹ ವೈರಸ್‌ಗಳು ಮತ್ತು ಇತರೆ ವೈರಸ್‌ಗಳು ಹಬ್ಬುವುದು ಕಡಿಮೆಯಾಗುತ್ತದೆ."

(ಐಎಎನ್‌ಎಸ್ ಸುದ್ದಿ ಸಂಸ್ಥೆಯ ವರದಿ ಆಧಾರಿತ)

# ಮಾವಿನ ರಕ್ಷಣೆಗೆ ಸಗಣಿ ಮತ್ತು ಗಂಜಲ

ಮಾವಿನ ಬೂದಿರೋಗಕ್ಕೆ ಚಿತ್ರದುರ್ಗದ ಮಹಾವೀರ್ ಮತ್ತು ಬೆಂಗಳೂರಿನ ಗೋವಿಂದ ಕಬಾಡಿಯವರು ತಮ್ಮದೇ ಆದಂತಹ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

ಮಹಾವೀರರು ಮೊದಲನೇ ಹಂತವಾಗಿ ಫಸಲು ಬಂದ ನಂತರ ಸೆಗಣಿ ಮತ್ತು ಗಂಜಲದ ಮಿಶ್ರಣವನ್ನು ಮರದ ರಂಧ್ರಗಳಿಗೆ ಮತ್ತು ಮೇಲ್ಮೈಗೆ ತುಂಬುತ್ತಾರೆ. ಈ ವಿಧಾನವನ್ನು ವರ್ಷಕ್ಕೆ ಒಮ್ಮೆ ಮಾತ್ರ ಮಾಡುತ್ತಾರೆ. ನಂತರ ಜೀವಾಮೃತವನ್ನು 10 ಲೀಟರ್ ಗಂಜಲ, 10 ಕಿಲೋ ಸಗಣಿ, 2 ಕಿಲೋ ಬೇಳೆಕಾಲಿನ ಹಿಟ್ಟು, 2 ಕಿಲೋ ಕಪ್ಪು ಬೆಲ್ಲ, 2 ಹಿಡಿ ಮಣ್ಣು ಇವುಗಳನ್ನು 200 ಲೀಟರ್ ನೀರಿಗೆ ಕೊಳೆ ಹಾಕಿ 9 ದಿನಗಳ ನಂತರ ಫಿಲ್ಟರ್ ಮಾಡಿ ತಯಾರಿಸಿ ಇಟ್ಟುಕೊಳ್ಳುತ್ತಾರೆ. ಇದನ್ನು 20 ಅಥವಾ 30 ದಿನಗಳಿಗೊಮ್ಮೆ ಹೂ ಬಿಡುವ ಮೊದಲು ಮರಗಳಿಗೆ ಸಿಂಪಡಿಸಿದರೆ ಬೂದಿ ರೋಗವನ್ನು ತಡೆಯಬಹುದು ಎನ್ನಲಾಗಿದೆ. ಹೂ ಬಿಟ್ಟ ನಂತರವೂ ಬೂದಿರೋಗ ಕಾಣಿಸಿಕೊಂಡರೆ 15 ದಿನಗಳ ಅಂತರದಲ್ಲಿ ಎರಡು ಬಾರಿ ಹುಳಿ ಮಜ್ಜಿಗೆಯನ್ನು ಸಿಂಪಡಿಸುತ್ತಾರೆ. ಕಾಯಿ ಕಚ್ಚಿಕೊಂಡ ನಂತರ "ಅಗ್ನಿಅಸ್ತ್ರ" ಮಿಶ್ರಣವನ್ನು 5 ಕೆ.ಜಿ. ಬೇವಿನ ಎಲೆ, 2 ಕೆ.ಜಿ. ಹೊಗೆಸೊಪ್ಪು, 3 ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, 20 ಲೀ. ಜವಾರಿ ಆಕಳ ಗಂಜಲ, ಇವುಗಳನ್ನು 20 ದಿನಗಳು ನೆನೆಸಿ ನಂತರ ಸೋಸಿ ತಯಾರಿಸಿ ಇಟ್ಟುಕೊಳ್ಳುತ್ತಾರೆ. ಇದನ್ನು 200 ಲೀ. ನೀರಿಗೆ ಸೇರಿಸಿ ಎರಡು ಬಾರಿ ಸಿಂಪಡಿಸಿದರೆ ಬಿಳಿಸೊಳ್ಳೆಗಳ ಸಮಸ್ಯೆಯನ್ನು ತಡೆಗಟ್ಟಬಹುದಂತೆ.

ಬೆಂಗಳೂರಿನ ಗೋವಿಂದ ಕಬಾಡಿಯವರು ಬೂದಿರೋಗ ನಿಯಂತ್ರಣಕ್ಕೆ ಅರಿಸಿನ ಕೊಂಬುಗಳನ್ನು ಎರಡು ದಿನ ನೀರಿನಲ್ಲಿ ನೆನೆಸಿ, ರುಬ್ಬಿ ನೀರಿನೊಂದಿಗೆ ಸೇರಿಸಿಕೊಂಡು ಮೊಗ್ಗು ಕಾಣಿಸಿಕೊಂಡ ಮೊದಲ ವಾರದಲ್ಲಿ ಮೊಗ್ಗು ಅರಳುವ ಮುನ್ನ ಸಿಂಪಡಿಸುತ್ತಾರೆ. ಹೂ ಉದುರದೇ ಇರುವುದಕ್ಕೆ ಮೂರನೇ ವಾರದಲ್ಲಿ ಬೇವಿನ ಎಣ್ಣೆ, ಬೆಳ್ಳುಳ್ಳಿ, ಮೆಣಸಿನಕಾಯಿ, ಮೆಣಸಿನಕಾಯಿ, ಲೋಳೆಸರದ ರುಬ್ಬಿದ ಮಿಶ್ರಣವನ್ನು 24 ಘಂಟೆಗಳ ನಂತರ ಮರಕ್ಕೆ ಸಿಂಪಡಿಸುತ್ತಾರೆ. ಐದನೇ ವಾರದಲ್ಲಿ ಪಂಚಗವ್ಯವನ್ನು 5 ಕೆ.ಜಿ. ಸಗಣಿ, 5ಲೀ. ನೀರು, 2 ಲೀ. ಹಸುವಿನ ಹಾಲು, 2 ಲೀ. ಮೊಸರು, ಒಂದು ಲೀ. ತುಪ್ಪ ಮತ್ತು 2 ಲೀ. ಕಬ್ಬಿನ ರಸವನ್ನು ಮಣ್ಣಿನ ಮಡಕೆಯಲ್ಲಿ ಹಾಕಿ, ಚೆನ್ನಾಗಿ ಮಿಶ್ರಣ ಮಾಡಿ ತಯಾರಿಸಿ ಮೂರು ವಾರಗಳ ನಂತರ 100 ಲೀ. ನೀರಿನಲ್ಲಿ 2 ಲೀ.ನಂತೆ ಬೆರೆಸಿ ಸಿಂಪಡಿಸುತ್ತಾರೆ.

(ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದವರು ಪ್ರಕಟಿಸುತ್ತಿರುವ "ಹಿತ್ತಲ ಗಿಡ" ಚಾತುರ್ಮಾಸಿಕ ಪತ್ರಿಕೆಯಿಂದ)



## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 23ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com